REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 13 | ISSUE - 11 | AUGUST - 2024

# ಶ್ರೀ ಓಂಕಾರೇಶ್ವರ ಜಾತ್ರೆಯ ಸಾಂಸ್ಕೃತಿಕ ಸಂಗಮ

ಡಾ.ಸುನಿತಾ.ಪಿ.ಮುಲಗೆ
ಅತಿಥಿ ಉಪನ್ಯಾಸಕರು
ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಕಲಬುರಗಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಸೇರಿದ ಪ್ರಮುಖ ಜಿಲ್ಲೆ. ಅನೇಕ ರಾಜಮನೆತನಗಳು ಇಲ್ಲಿ ಆಳ್ವಿಕೆ ಮಾಡಿ ಇತಿಹಾಸವನ್ನು ಮೆರೆದಿವೆ. ಜೈನರ, ಶರಣರ ,ದಾಸರು ಹುಟ್ಟಿದ ಬೀಡಾಗಿರುವುದು ನಮ್ಮ ಹೆಮ್ಮೆಯ ವಿಷಯ. ಜೊತೆಗೆ  ಧಾರ್ಮಿಕ, ಐತಿಹಾಸಿಕ, ಸಾಹಿತ್ಯಕ, ಸಂಸ್ಕೃತಿಕ ನೆಲೆಯಾಗಿದೆ. ನಮ್ಮ ನಾಡಿನಲ್ಲಿ ಕಂಡುಬರುವ ಭಾಷೆ, ಕಲೆ, ಶೈಲಿ, ನಡೆ ನುಡಿ, ಆಚಾರ ವಿಚಾರ, ದೇಸಿ ಚಿಂತನೆಗಳು ಬದುಕಿನಲ್ಲಿ ಕೇಂದ್ರಿಕೃತವಾಗಿದೆ. ಇವುಗಳು ಜನಪದರಿಂದ ಹುಟ್ಟಿ ಬೆಳೆದು, ಅನೇಕ ಸಂಪ್ರದಾಯ, ಹಬ್ಬ ಹರಿದಿನ, ಉತ್ಸವಗಳು, ಆಚರಣೆಗಳಾಗಿ ಇಂದು ನಗರ ಪ್ರದೇಶದವರೆಗೂ ವ್ಯಾಪಿಸಿವೆ. ಜನರೆಲ್ಲರೂ ಸೇರಿಕೊಂಡು ದೇವರ ಹೆಸರಲ್ಲಿ ನಡೆಯುವ ಸಂಭ್ರಮದ ಆಚರಣೆಗಳನ್ನು ಉತ್ಸವ ಅಥವಾ ಜಾತ್ರೆ ಎಂದು ಕರೆಯುತ್ತೇವೆ.



ಜಾತ್ರೆ ಎಂಬ ಪದವು ಇಂಗ್ಲಿಷಿನ ' Festival ಮತ್ತು Fair ' ಎಂಬ ಪದದಿಂದ ಬಂದಿದ್ದು, ಅದಕ್ಕೆ ಕನ್ನಡದಲ್ಲಿ ಹಬ್ಬ ಮತ್ತು ಜಾತ್ರೆ ಎನ್ನುವ ಅರ್ಥವನ್ನು ಹೊಂದಿವೆ. ಪ್ರತಿಯೊಂದು ಹಬ್ಬ ಮತ್ತು ಜಾತ್ರೆಗಳು ಜನಪದರ ಬದುಕಿನಿಂದ ಹುಟ್ಟಿ ಜನಪದ ಸಂಸ್ಕೃತಿಯಲ್ಲಿ ಸೇರಿಕೊಂಡಿದ್ದು. ಧಾರ್ಮಿಕ ವಿಧಿ–ವಿಧಾನಗಳು, ಸಂಪ್ರದಾಯ ಆಚರಣೆಗಳು ಇವುಗಳಿಗೆ ಮೂಲ ಪ್ರೇರಣೆಯಾಗಿವೆ. ಜಾತ್ರೆಗಳು ಧರ್ಮದೊಂದಿಗೆ, ಧರ್ಮವನ್ನು ಜನ ಜೀವನದೊಂದಿಗೆ ಒಂದುಗೂಡಿಸಿರವುದು ಭಾರತೀಯ ಸಂಸ್ಕೃತಿಯ ವಿಶೇಷ ಗುಣವಾಗಿದೆ. ಜಾತ್ರೆ ಎಂಬ ಪದದ ಅರ್ಥವು ಬಹುವ್ಯಾಪ್ತಿಯನ್ನು ಪಡೆದುಕೊಂಡಿದೆ. ಇದರಲ್ಲಿ ಅನೇಕ ಶೈಕ್ಷಣಿಕ ಅಂಶಗಳು, ಸಂಸ್ಕೃತಿಗೆ ಸಂಬಂಧಿಸಿದ ಇತಿಹಾಸದ ಪರಂಪರೆ ಒಳಗೊಂಡಿದೆ. ಜಾತ್ರೆಯಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳು ಮಕ್ಕಳಿಂದ –ಹಿರಿಯರವರೆಗೂ, ಸಂಭ್ರಮಿಸುವ ಮತ್ತು ಅನುಭವಿಸುವ ಅಂಶವಾಗಿದೆ.

ಜಾತ್ರೆಯು ಒಂದು ಪ್ರದೇಶದ ಇಲ್ಲವೆ ಒಂದು ಊರಿನಲ್ಲಿ ಜರಗುವ ಮತ್ತು ಹಬ್ಬದ ವಾತಾವರಣವನ್ನು ಸೃಷ್ಟಿಸುವ ಉತ್ಸವ. ಸಭೆ, ಸಮಾರಂಭ, ಮನೋರಂಜನೆ ಸಾಹಿತ್ಯಕ, ಸಾಂಸ್ಕೃತಿಕ, ಧಾರ್ಮಿಕ ಆರ್ಥಿಕ ರಾಜಕೀಯ ಪ್ರತಿಯೊಂದು ಹಂತದಲ್ಲಿ ಎಲ್ಲಾ ಬಗೆಯ ದೃಷ್ಟಿ ದೋರಣೆಗಳನ್ನು ಪಡೆದು, ಎಲ್ಲರಲ್ಲಿಯೂ ಐಕ್ಯತೆಯ ಭಾವನೆಯನ್ನು ಪ್ರತಿಬಿಂಬಿಸುತ್ತವೆ. ಈ ರೀತಿಯ ಉತ್ಸವಗಳು ಜನ ಜೀವನದಲ್ಲಿ ಸಂತೋಷವನ್ನು ವದಗಿಸುವವು. ಇಂತಹ ಆನಂದದ ದಿನವು ಶಿವರಾತ್ರಿ ಹಬ್ಬದ ಅಂಗವಾಗಿ ನಡೆಯುವ 'ಓಂಕಾರೇಶ್ವರ ಜಾತ್ರೆಯು' ಒಂದಾಗಿದೆ. ಒಂದರ್ಥದಲ್ಲಿ ಜಾತ್ರೆಯೆಂದರೆ ಸಮ್ಮೇಳನ, ಮೆರವಣಿಗೆ ಎಂಬ ಸಂಕೀರ್ಣ ಅರ್ಥಗಳಿಂದ ಕೂಡಿದ್ದು, ಊರುಕೇರಿಯಲ್ಲಿ ನಡೆಯುವ ಒಂದು ಮಹತ್ಕಾರ್ಯ ವಿಧಿ–ವಿಧಾನ.

'ಶ್ರೀ ಓಂಕಾರೇಶ್ವರ ಜಾತ್ರೆಯ' ವೈಶಿಷ್ಟ್ಯವೆಂದರೆ ನಮ್ಮ ಕಲಬುರಗಿಯ ಆಳಂದ ರಸ್ತೆಯ ಸ್ವಾಮಿ ವಿವೇಕಾನಂದ ಬಡಾವಣೆಯಯಲ್ಲಿ ಕಾಣಿಸಿಕೊಳ್ಳುವ ಒಂದು ಅಪರೂಪದ ಜಾತ್ರಾ ಮಹೋತ್ಸವವಾಗಿದೆ. ವರ್ಷದಿಂದ ವರ್ಷಕ್ಕೆ ಬಹುವ್ಯಾಪಕವಾಗಿ ನೆರವೇರಿಸಲಾಗುತ್ತಿದ್ದು, ಇಲ್ಲಿ ನಡೆಯುವ ಪ್ರತಿಯೊಂದು ಕಾರ್ಯಕ್ರಮಗಳು ಸನ್ನಿವೇಶಗಳು ಒಳ್ಳೆಯ ವಾತಾವರಣದ ಜೊತೆಗೆ ಮನಸ್ಸಿಗೆ ನೆಮ್ಮದಿ–ಶಾಂತಿಯನ್ನು ಒದಗಿಸುವುದು. ನಾಡು ನುಡಿಯ ದೇಸಿ ಹಬ್ಬದ ಸಾಂಸ್ಕೃತಿಕ ಪ್ರತಿಕವಾಗಿ ಕಂಗೊಳಿಸುತ್ತದೆ.

ಸುಮಾರು ೨೫ ವರ್ಷಗಳ ಹಿಂದೆ ಒಂದು ಶಿವಲಿಂಗವನ್ನು ಪ್ರತಿಷ್ಠಾಪಿಸಿದ ಚಿಕ್ಕ (ಗುಡಿ) ದೇವಸ್ಥಾನವಾಗಿ ಜೀರ್ಣೋದ್ಧಾರಗೊಂಡಿತು. ಶಿವಲಿಂಗಕ್ಕೆ ದಿನವು ಪೂಜೆಯನ್ನು ಸಲ್ಲಿಸಿಸುತ್ತ , ಪ್ರತಿ ಸೋಮವಾರ ಮತ್ತು ಶ್ರಾವಣ ಮಾಸದಲ್ಲಿ ಬಡಾವಣೆಯಲ್ಲಿರುವ (೮–೧೨) ಮಹಿಳೆಯರು ಸಾಯಂಕಾಲದ ವೇಳೆಗೆ ಭಕ್ತಿ ಸುಧೆಯ ಗೀತೆಯ ಮೂಲಕ ಭಜನೆ ಮಾಡುತ್ತಿದ್ದರು. ಹಾಗೆಯೇ ಶ್ರಾವಣ ಮಾಸದ ಕೊನೆಯ ಸೋಮವಾರ ದಿನದಂದು ದೇವಾಲಯದಲ್ಲಿ ಸಣ್ಣ ಪ್ರಮಾಣದ ಉತ್ಸವವನ್ನು

ಮಾಡುತ್ತಿದ್ದರು. ಆ ಮಹಿಳಾ ಮಣಿಗಳು ಶಿವಲಿಂಗಕ್ಕೆ ಮಾಡಿದ ಸೇವೆ ಅಪಾರವಾದದ್ದು, ಅಂದು ಸುತ್ತಮುತ್ತಲಿನ ಜನರೆಲ್ಲ ಬಂದು ಪ್ರಸಾದವನ್ನು ಸ್ವೀಕರಿಸಿ ದೇವರಿಗೆ ನಮಸ್ಕರಿಸುತ್ತಿದ್ದರು. ಹೀಗೆ ಈ ಎಲ್ಲಾ ಚಟುವಟಿಕೆಗಳು ಯಾವುದೇ ತೊಂದರೆ ಇಲ್ಲದೆ ಆ ತಾಯಂದಿರು ಸಂತೋಷ ಸಡಗರದಿಂದ ಕಾರ್ಯಕ್ರಮಗಳನ್ನು ಆಚರಿಸಿಕೊಂಡು ಬಂದಿರುವುದೇ ಹೆಮ್ಮೆಯ ವಿಷಯ.

೧

ಇಂದು ಅದೇ ದೇವಸ್ಥಾನವು ಭಕ್ತಾದಿಗಳ ಸಮೂಹಗಳಿಂದ ಪುನರ್ ನಿರ್ಮಾಣಗೊಂಡು ಉನ್ನತ ಮಟ್ಟದಲ್ಲಿ ಜಾತ್ರೆಯನ್ನು ನೆರವೇರಿಸಲಾಗುತ್ತಿದೆ. ಬಡಾವಣೆಯ ಮುಖಂಡರು ಮತ್ತು ಇತರರು ಜಾತ್ರೆಯ ಸಲುವಾಗಿ ಒಂದು ಸಭೆಯಲ್ಲಿ ಸೇರಿ, ಚರ್ಚೆ ಮಾಡಿ ಜಾತ್ರೆಯನ್ನು ಸುವ್ಯವಸ್ಥಿತವಾಗಿ ನಡೆಯಲು ಕೆಲವು ಕ್ರಮಗಳನ್ನು ಕೈಗೊಳ್ಳುತ್ತಾರೆ. ಒಂದು ತಿಂಗಳ ಮುಂಚಿತವಾಗಿ ಎಲ್ಲರೂ ತಮ್ಮ ಭಕ್ತಿ ಪೂರ್ವಕವಾಗಿ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಆರ್ಥಿಕವಾಗಿ ನೆರವಾಗುವರು. ವರ್ಷದಲ್ಲಿ ಶ್ರಾವಣ ಮಾಸ ಮತ್ತು ಶಿವರಾತ್ರಿ ದಿನ ಎರಡು ಬಾರಿ ಹಬ್ಬದ ವಾತಾವರಣವು ಇಲ್ಲಿ ಸೃಷ್ಟಿಯಾಗುತ್ತದೆ. ಶ್ರಾವಣ ಮಾಸದ ಪ್ರಯುಕ್ತ ದಿನನಿತ್ಯವೂ ದೇವಸ್ಥಾನದಲ್ಲಿ ರುದ್ರಾಭಿಷೇಕ ಮತ್ತು ಸಂಜೆ ವೇಳೆಗೆ ಭಜನೆಯನ್ನು ಮಾಡಿದ ನಂತರ ಪ್ರಸಾದ ವಿತರಣೆಯು ನಡೆಯುವದು. ಶ್ರಾವಣ ಮಾಸದ ಕೊನೆಯ ದಿನದಂದು ವಿಜೃಂಭಣೆಯಿಂದ ದೇವರ ಉತ್ಸವ (ಖಾಂಡ) ಮಾಡುತ್ತಾರೆ.

ಶಿವರಾತ್ರಿಯ ದಿನದಂದು ನಡೆಯುವ ಜಾತ್ರೆಯು ತುಂಬಾ ವಿಶೇಷವಾಗಿ ನೇರವೇರಿಸಲಾಗುತ್ತದೆ. ಈ ಜಾತ್ರೆಯ ಮುಂಚಿತವಾಗಿ ೧೧ ದಿನಗಳಿಂದ ಪ್ರಾರಂಭವಾಗಿ ಅಮಾವಾಸ್ಯೆಯ ದಿನದ ವರೆಗೊ ನಡೆಯುವುದು. ಸಂಜೆ ವೇಳೆ ಪುರಾಣವನ್ನು ಹಮ್ಮಿಕೋಳಲಾಗುವುದು. ೨೦೧೪ ರಲ್ಲಿ ರಲ್ಲಿ ಪ್ರಥಮ ಬಾರಿಗೆ 'ಗುಡ್ಡಾಪುರದ ದಾನಮ್ಮ' ಮಹಾಪುರಾಣವನ್ನು ನಿಯೋಜಿಸಿ ದಾನಮ್ಮನ ಭಕ್ತಿ ಮಹಿಮೆಯನ್ನು ಜನರಲ್ಲಿ ಭಕ್ತಿಭಾವದ ಸುಧೆಯನ್ನು ಮೂಡಿಸಲಾಯಿತು. ಅದರಂತೆ ೨೦೧೫ ರಲ್ಲಿ " ಶ್ರೀ ಶರಣಬಸವೇಶ್ವರ"ರ ಮಹಾಪುರಾಣವನ್ನು ಆಯೋಜಿಸಿ ಶರಣರ ಸತ್ಯಕಾಯಕ, ನಿಷ್ಠೆ, ದಾಸೋಹದ ಪರಿಕಲ್ಪನೆಗಳು, ಬದುಕಿನ ಮೌಲ್ಯಗಳ ಬಗ್ಗೆ ಜನರಲ್ಲಿ ಜಾಗೃತಿಗೋಳಿಸಿದವು. ೨೦೧೬ ರಲ್ಲಿ "ಸೋಲಾಪುರದ ಸಿದ್ಧರಾಮೇಶ್ವರರ" ಮಹಾಪುರಾಣವು, ೨೦೧೯ ರಿಂದ ೨೦೨೩ನೇ ವರ್ಷದಲ್ಲಿ ಅರಿವು–ಆಚಾರ–ಆಧ್ಯಾತ್ಮಿಕ ಪ್ರವಚನ, ೨೦೨೪ನೇ ವರ್ಷದಲ್ಲಿಯೂ ೧೧ ದಿನಗಳ 'ಶಿವಮಹಾಪುರಾಣವನ್ನು'ಏರ್ಪಡಿಸಲಾಗಿದೆ. ಪ್ರತಿವರ್ಷವೂ ಕೂಡ ಪ್ರವಚನ ಕಾರ್ಯಕ್ರಮದಲ್ಲಿ ನೂರಾರು ಭಕ್ತಾದಿಗಳು ಇದರಲ್ಲಿ ಭಾಗವಹಿಸುತ್ತಾರೆ. ವರ್ಷದಿಂದ ವರ್ಷಕ್ಕೆ ಪ್ರವಚನ ಕಾರ್ಯಕ್ರಮವು ದೊಡ್ಡ ಪಮಾಣದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಪುರಾಣದ ನಂತರ ಪ್ರಸಾದವನ್ನು ವಿತರಿಸಲಾಗುವದು. 'ಅನ್ನದಾನ ಶ್ರೇಷ್ಠದಾನ' ಎಂಬಂತೆ ದಾಸೋಹ ಕ್ರಿಯೆ ವರ್ಷದಲ್ಲಿ ಎರಡು ಬಾರಿ ನಡೆಯುವುದು. ಬಡಾವಣೆಯಲ್ಲಿರುವ ಪ್ರತಿಭಾವಂತ ಮಕ್ಕಳಿಗೆ ಮತ್ತು ವಿಷಯ ಸಾಧಕರಿಗೆ ಸನ್ಮಾನ ಕಾರ್ಯಕ್ರಮವು ನಡೆಯುತ್ತದೆ.

ಕುಟುಂಬಸ್ಥರು ಆರ್ಥಿಕವಾಗಿ ಸಮಸ್ಯೆಗಳನ್ನು ಹೊಂದಿದವರು ಇಲ್ಲವೇ ದೇವರ ಆಶೀರ್ವಾದದ ಪ್ರಯುಕ್ತ ಈ ದೇವಸ್ಥಾನದ ಸನ್ನಿಧಿಯಲ್ಲಿ ಮದುವೆ ಸಮಾರಂಭ, ಹುಟ್ಟಿದ ಹಬ್ಬಗಳು, ಹಾಗೂ ಇನ್ನಿತರ ಶುಭ ಸಮಾರಂಭದ ಕಾರ್ಯಕ್ರಮಗಳು ನಡೆಯುವುದು ಇಲ್ಲಿನ ವಿಶೇಷವಾಗಿದೆ.

ಮಹಾಶಿವರಾತ್ರಿ ದಿನದಂದು ಬೆಳಿಗ್ಗೆ ದೇವಸ್ಥಾನದಲ್ಲಿ ಮಹಾರುದ್ರಾಭಿಷೇಕ, ಹೂವಿನ ಅಲಂಕಾರ, ಹಣ್ಣುಗಳ ನೈವೇದ್ಯ, ಹಲವು ರೀತಿಯ ಪೂಜೆ ಪುನಸ್ಕಾರಗಳು ಸಲ್ಲಿಸಿ. ಸಂಪ್ರದಾಯದಂತೆ ಈ ದಿನದಂದು ಶಿವರಾತ್ರಿಯ ನಿಮಿತ್ತ ಉಪವಾಸವಿದ್ದು, ಸಾಯಂಕಾಲದ ವೇಳೆಯಲ್ಲಿ ಲಿಂಗ ಪೂಜೆ ಮಾಡಿ ಉಪಹಾರವನ್ನು ತೆಗೆದುಕೊಳ್ಳುವುದು ಹಿಂದಿನಿಂದ ನಡೆದು ಬಂದ ದೇಶಿ ಆಚರಣೆಯಾಗಿದೆ. ಮನೆಯಲ್ಲಿ ಪೂಜಾ ಕಾರ್ಯಕ್ರಮಗಳು ಆಚರಿಸಿ ಮುಗಿಯುವ ಹೊತ್ತಿಗೆ ಬಾಗಿಲ ಹೊರಗೆ ಬಿಂದಿಗೆ ನೀರು, ವಿಭೂತಿ, ಕುಂಕುಮ, ತೆಂಗು, ಆರತಿ, ಹೂ–ಹಣ್ಣು ಇತ್ಯಾದಿಗಳೊಂದಿಗೆ ಸಿದ್ಧಮಾಡಿ; ದೇವರ ಪಲ್ಲಕ್ಕಿ ಬರುವುದನ್ನು ಕಾಯುತ್ತಿರುವ ಹೊತ್ತಿಗೆ, ಸಂಧ್ಯಾ ಕಾಲದಲ್ಲಿ ಮಂಗಳ–ವಾದ್ಯಗಳೊಂದಿಗೆ ಬಡಾವಣೆಯ ಪ್ರತಿ ಮನೆಯಂಗಳದ ಎದುರಲ್ಲಿ ಪಲ್ಲಕ್ಕಿಯು ಆಗಮಿಸುತ್ತಿರಲು, ಡೊಳ್ಳು, ಕುಣಿತ, ಮದ್ದು ಇವುಗಳ ಮಧ್ಯೆ ಪುರಂತರು ಬಂದು ಭಾಗಿಯಾಗುವರು. ಪಲ್ಲಕಿಯ ಮೆರವಣಿಗೆ ನಡೆಯುತ್ತಿರಲು ಬಡಾವಣೆಯಲ್ಲಿ ಸಂತಸದ ಸಂಭ್ರಮದ ಕ್ಷಣಗಳನ್ನು ನೋಡಲು ಎರಡು ಕಣ್ಣುಗಳು ಸಾಲದು. ತನು –ಮನ ರೋಮಾಂಚನಗೊಳ್ಳುವವು.

ದೇವಸ್ಥಾನದ ಬಳಿ ಪಲ್ಲಕ್ಕಿ ಬರುತಿರಲು, ವೀರಭದ್ರೇಶ್ವರ ದೇವರ ಹೆಸರಿನಲ್ಲಿ ನಡೆಯುವ 'ಪುರವಂತಿಕೆ' ಇದು ಜನಪದ ಕಲೆಗಳಲ್ಲಿ ವೀರಗಾಸೆ ಕುಣಿತಕ್ಕೆ ಒಂದು ಪುರಾಣಿಕ ಹಿನ್ನೆಲೆಯಲ್ಲಿರುವ ಧಾರ್ಮಿಕ ವಿಧಾನವಗಿದೆ. ಪುರವಂತಿಕೆ ಮಾಡುವವರನ್ನು ಪುರಂತರು, ಪುರವಂತರು ಎಂದು ಕರೆಯುವರು. ಅವರ ಉಡುಗೆ ತೊಡಗೆಯು ವಿಶಿಷ್ಟ ರೀತಿಯಲ್ಲಿರುವುದು. ಪುರಂತರು ಶಾಸ್ತ್ರವನ್ನು ಹೇಳುವಾಗ ದೇವರನ್ನು (ವೀರಭದ್ರ) ಕೊಂಡಾಡಿ ನೃತ್ಯವನ್ನು ಮಾಡುವಾಗ ಮನಸ್ಸು ಚಿತ್ತಗೊಂಡು ಮೈ ಮನವು ಸೂರೆಗೊಳ್ಳುವವು. ಪುರಂತರು ದೇವರ ಮಹಿಮೆಯನ್ನು ಭಕ್ತಿಯಿಂದ ಕೊಂಡಾಡುವರು. ರಥೋತ್ಸವ ಜರಗುವ ಮುಂಚಿತವಾಗಿ

೨

ಗುಗ್ಗಳ ಮತ್ತು ಪಲ್ಲಕ್ಕಿ ದೇವಸ್ಥಾನದ ಸುತ್ತ ಐದು ಪ್ರದಕ್ಷಣೆಯನ್ನು ಹಾಕಿದ ಅರೆಗಳಿಗೆಯಲ್ಲಿ ಕುಂಭ ಮೆರವಣಿಗೆಯೊಂದಿಗೆ 'ಶ್ರೀ ಓಂಕಾರೇಶ್ವರ ದೇವರ ರಥೋತ್ಸವವು" ಜರುಗುವದು. ಈ ಸಂದರ್ಭದಲ್ಲಿ ಪಾಲ್ಗೊಂಡ ಎಲ್ಲಾ ಭಕ್ತಾದಿಗಳು ಉತ್ಸವದ ಝೇಂಕಾರಗಳನ್ನು ಹಾಕುತ್ತಾ, ಶ್ರೀ ಓಂಕಾರೇಶ್ವರ ದೇವರಿಗೆ ಜೈಕಾರ ಎನ್ನುವಲ್ಲಿ ಶಿವನನ್ನು ನೆನೆಯುತ್ತಾ ಜೈಕಾರದ ಜೊತೆಗೆ ರಥೋತ್ಸವ ಪೂರ್ಣಗೊಳ್ಳುವದು. ಈ ಸುದಿನದಂದು ಜನರಲ್ಲಿ ಜಾತಿ–ಮತ, ಭೇದ– ಭಾವನೆಗಳನ್ನು ಮರೆತು ಮೇಲು–ಕೀಳು,

ಎನ್ನುವ ತಾರತಮ್ಯವನ್ನು ತೊರೆದು ಸಮಾನತೆ ಹಾಗು ಐಕ್ಯತೆಯ ಮನೋಭಾವನೆಯನ್ನು ಬೆಳೆಸಿಕೊಳ್ಳುವುದು ಗಮನಾರ್ಹವಾದ ಸಂಗತಿ. ಕಳೆದ ವರ್ಷಗಳಿಂದ ಈ ಜಾತ್ರಾ ಮಹೋತ್ಸವ ಯಾವುದೇ ಅಡ್ಡಿ ಆತಂಕಗಳಿಲ್ಲದೆ ನೆರವೇರುತ್ತಿರುವುದು ದೇವರ ಆಶೀರ್ವಾದವೆ ಸರಿ . ಇಂದು ನಾಳೆ ಮುಂದೆ ಪ್ರತಿವರ್ಷವು ಜಾತ್ರಾ ಮಹೋತ್ಸವ ಈ ಬಡಾವಣೆಯಲ್ಲಿ ನಡೆಯಲಿ, ಅದನ್ನು ಶಾಂತಿ ಸಮೃದ್ಧಿಯಿಂದ ನೆರವೇರಿಸಲು ಉತ್ಸಾಹ ಶಕ್ತಿ ಸಂಪತ್ತನ್ನು ಆ ದೇವರು ಜನರಲ್ಲಿ ಕರುಣಿಸಲಿ, ಎಲ್ಲೆಡೆಯಲ್ಲೂ ಶ್ರೀ ಓಂಕಾರೇಶ್ವರ ದೇವರ ಮಹಿಮೆ ಹರಡಲಿ, ಭಗವಂತನ ಆಶೀರ್ವಾದ ನಮ್ಮೆಲ್ಲರ ಮೇಲೆ ಸದಾಕಾಲ ಇರಲಿ ಎಂದು ಆಶಿಸುತ್ತೇನೆ.